# ಸರ್ಕಾರಿ ಪ್ರೌಢಶಾಲೆ ಮುರುಂಡಿ,

## ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

# ಪ್ರಥಮ ಸೆಮಿಸ್ಟರ್ ಸಂಕಲನಾತ್ಮಕ ಮೌಲ್ಯಮಾಪನ 2022-23

# ವಿಷಯ: ವಿಜ್ಞಾನ

## ತರಗತಿ: 8

## ಕಲಿಕಾಫಲ ಆಧಾರಿತ ಉದ್ದಿಷ್ಟವಾರು, ಪ್ರಶ್ನಾವಾರು ಲೆವೆಲ್-1 ಪ್ರಶ್ನೆಪತ್ರಿಕೆ


**ಇಂದ**

**ಅಂಜನಪ್ಪ ಕೆ ಆರ್ (ಅಂಜು ಸಕಲೇಶಪುರ)**

**ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು**

**ಹಾಸನ ಜಿಲ್ಲೆ**

# ಕಲಿಕಾ ಫಲಗಳ ವಿಂಗಡನೆ

| ಥೀಮ್ | ಕಲಿಕಾ ಫಲಗಳು | ರೂ.ಮೌ. ಪರಿಗಣಿಸದ ಕಲಿಕಾ ಫಲಗಳು | ಸಂ.ಮೌ. ಪರಿಗಣಿಸದ ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆ | ಒಟ್ಟು ಅಂಕಗಳು |
|---|---|---|---|---|---|
| 1.ಬೆಳೆಯ ಉತ್ಪಾದನೆ ಮತ್ತು ಬೆಳೆಯ ನಿರ್ವಹಣೆ | 1. ನಾವು ಸೇವಿಸುವ ಆಹಾರದ ಮೂಲಗಳನ್ನು ತಿಳಿಯುವರು.<br>2. ಆಹಾರವಾಗಿ ಬಳಸುವ ಸಸ್ಯದ ವಿವಿಧ ಭಾಗಗಳನ್ನು ಗುರುತಿಸುವರು ಮತ್ತು ತಮ್ಮ ಆಹಾರದಲ್ಲಿ ಅವುಗಳನ್ನು ಪತ್ತೆಹಚ್ಚುವರು.<br>3. ಆಹಾರದಲ್ಲಿರುವ ವಿವಿಧ ಪೋಷಕಾಂಶಗಳನ್ನು ಗುರುತಿಸಿ, ತಮ್ಮ ಆಹಾರದಲ್ಲಿ ಅವುಗಳನ್ನು ಗುರುತಿಸುವರು.<br>4. ಬೆಳೆ ಅರ್ಥ ತಿಳಿದು,ಬೆಳೆಯ ವಿಧಗಳನ್ನು ಉದಾಹರಣೆ ಸಹಿತ ವರ್ಗೀಕರಿಸುವರು.<br>5. ಕೃಷಿಯ ಹಂತಗಳನ್ನು ಅರಿಯುವರು. | **1,3** | **2,4,5** | **ಲಿಖಿತ–1**<br>**ಮೌಖಿಕ–1** | **ಲಿಖಿತ–5**<br>**ಮೌಖಿಕ–1** |
| 2.ಸೂಕ್ಷ್ಮಜೀವಿಗಳು– ಮಿತ್ರ ಮತ್ತು ಶತ್ರು | 1. ಸೂಕ್ಷ್ಮ ಜೀವಿಗಳ ಅರ್ಥ ತಿಳಿದು ಅವುಗಳ ಪ್ರಧಾನ ಗುಂಪುಗಳನ್ನು ಗುರುತಿಸುವರು.<br>2. ಸೂಕ್ಷ್ಮಜೀವಿಗಳ ಉಪಯೋಗಗಳನ್ನು ಅರಿಯುವರು.<br>3. ಮಾನವರಲ್ಲಿ ರೋಗಕ್ಕೆ ಕಾರಣವಾಗುವ ಸೂಕ್ಷ್ಮಜೀವಿಗಳು ಮತ್ತು ಅವುಗಳಿಂದ ಉಂಟಾಗುವ ರೋಗಗಳನ್ನು ತಿಳಿಯುವರು.<br>4. ಆಹಾರ ಸಂರಕ್ಷಣೆಯ ವಿಧಾನಗಳನ್ನು ತಿಳಿಯುವರು. | **3** | **1,2,4** | **ಲಿಖಿತ–2**<br>**ಮೌಖಿಕ–1** | **ಲಿಖಿತ–3**<br>**ಮೌಖಿಕ–1** |
| 3.ಸಂಶ್ಲೇಷಿತ ಎಳೆಗಳು ಮತ್ತು ಪ್ಲಾಸ್ಟಿಕ್ | 1. ವಿವಿಧ ಬಟ್ಟೆಯ ತಯಾರಿಕೆಯ ವಿಧಾನ/ ಕ್ರಮವನ್ನು ವಿವರಿಸುವರು.<br>2. ಸಂಶ್ಲೇಷಿತ ನಾರನ್ನು ಗುಣಲಕ್ಷಣದ ಆಧಾರದ ಮೇಲೆ ವರ್ಗೀಕರಿಸುವರು.<br>3. ನಿತ್ಯಬಳಕೆಯಲ್ಲಿನ ಪ್ಲಾಸ್ಟಿಕ್ ವಸ್ತುಗಳನ್ನು ಗುಣಲಕ್ಷಣದ ಆಧಾರದ ಮೇಲೆ ವರ್ಗೀಕರಿಸುವರು | **2** | **1,3** | **ಲಿಖಿತ–1**<br>**ಮೌಖಿಕ–1** | **ಲಿಖಿತ–3**<br>**ಮೌಖಿಕ–1** |
| 4.ಲೋಹಗಳು ಮತ್ತು ಅಲೋಹಗಳು | 1. ಲೋಹ ಮತ್ತು ಅಲೋಹಗಳನ್ನು ಅವುಗಳ ಭೌತ ಗುಣಗಳ ಆಧಾರದ ಮೇಲೆ ವರ್ಗೀಕರಿಸುವರು.<br>2. ಲೋಹ ಮತ್ತು ಅಲೋಹಗಳು ಆಮ್ಲಜನಕ, ನೀರು, ಆಮ್ಲ – ಪ್ರತ್ಯಾಮ್ಲದೊಂದಿಗೆ ವರ್ತಿಸುವುದನ್ನು ಪರೀಕ್ಷಿಸಿ ತೀರ್ಮಾನ ಕೈಗೊಳ್ಳುವರು.<br>3. ಆಮ್ಲ – ಪ್ರತ್ಯಾಮ್ಲಗಳ ಗುಣಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವರು ಹಾಗೂ ಆಮ್ಲ–ಪ್ರತ್ಯಾಮ್ಲಗಳಲ್ಲಿರುವ ಲೋಹ ಮತ್ತು ಅಲೋಹಗಳನ್ನು ಗುರುತಿಸುವರು. | **1** | **2,3** | **ಲಿಖಿತ–2** | **ಲಿಖಿತ–5** |
| 5.ಕಲ್ಲಿದ್ದಲು ಮತ್ತು ಪೆಟ್ರೋಲಿಯಂ | 1. ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ವರ್ಗೀಕರಿಸುವುದು ಮತ್ತು ಬರಿದಾಗುವ ಮತ್ತು ಬರಿದಾಗದ ಸಂಪನ್ಮೂಲಗಳನ್ನು ತಿಳಿದು, ಅವುಗಳ ಪ್ರಾಮುಖ್ಯತೆ ಅರಿಯುವರು.<br>2. ಕಲ್ಲಿದ್ದಲು ಉಂಟಾಗುವಿಕೆ ಮತ್ತು ಅದರ ಉಪ ಉತ್ಪನ್ನಗಳನ್ನುತಿಳಿಯುವರು.<br>3. ಪೆಟ್ರೋಲಿಯಂ–ಗಣಿಗಾರಿಕೆ ಮತ್ತು ಸಂಸ್ಕರಣೆ ಹಾಗೂ ಉಪಯೋಗಗಳನ್ನು ಅರಿಯುವರು<br>4. ಪಳೆಯುಳಿಕೆ ಇಂಧನಗಳ ಉಳಿವಿಗಾಗಿ ಕೆಲವು ಕ್ರಮಗಳನ್ನು ತಿಳಿಸುವರು. | **1,4** | **2,3** | **ಲಿಖಿತ–2**<br>**ಮೌಖಿಕ–1** | **ಲಿಖಿತ–2**<br>**ಮೌಖಿಕ–1** |

# ಕಲಿಕಾ ಫಲಗಳ ವಿಂಗಡನೆ

| ಥೀಮ್ | ಕಲಿಕಾ ಫಲಗಳು | ರೂ.ಮೌ. ಪರಿಗಣಿಸದ ಕಲಿಕಾ ಫಲಗಳು | ಸಂ.ಮೌ. ಪರಿಗಣಿಸದ ಕಲಿಕಾ ಫಲಗಳು | ಪ್ರಶ್ನೆ ಸಂಖ್ಯೆ | ಒಟ್ಟು ಅಂಕಗಳು |
|---|---|---|---|---|---|
| 6.ಸಸ್ಯಗಳು ಮತ್ತು ಪ್ರಾಣಿಗಳ ಸಂರಕ್ಷಣೆ | 1. ವಿವಿಧ ಬಗೆಯ ಆವಾಸ ಸ್ಥಾನಗಳಲ್ಲಿ ಜೀವಿಗಳ ಹೊಂದಾಣಿಕೆಯನ್ನು ಅರಿಯುವರು/ಗುರುತಿಸಿವರು<br>2. ಅರಣ್ಯನಾಶದ ಅರ್ಥ ಮತ್ತು ಅದಕ್ಕೆ ಕಾರಣಗಳನ್ನುತಿಳಿಯುವರು<br>3. ಅರಣ್ಯನಾಶದ ಪರಿಣಾಮಗಳನ್ನು ಅರಿಯುವರು. ಕಾಡುಗಳ ಪ್ರಾಮುಖ್ಯತೆ ಅರಿತು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳುವರು. 4. ವನ್ಯ ಜೀವಿಗಳ ಸಂರಕ್ಷಣೆಗಾಗಿ ಸರ್ಕಾರ ರೂಪಿಸಿರುವ ಸಂರಕ್ಷಿತ ಪ್ರದೇಶಗಳ ಮಹತ್ವವನ್ನು ತಿಳಿಯುವರು ಮತ್ತು ವನ್ಯಜೀವಿಧಾಮ, ರಾಷ್ಟ್ರೀಯ ಉದ್ಯಾನವನ, ಮತ್ತು ಮೀಸಲು/ರಕ್ಷಿತ ಜೀವಗೋಳಗಳ ನಡುವಿನ ವ್ಯತ್ಯಾಸ ತಿಳಿಯುವರು.<br>5. ಸ್ಥಳೀಯ ಪ್ರಭೇದಗಳನ್ನು ಗುರುತಿಸುವರು ಮತ್ತು ಅವುಗಳ ಪ್ರಾಮುಖ್ಯತೆಯನ್ನು ಅರಿಯುವರು.<br>6. ಕೆಂಪು ದತ್ತಾಂಶ ಪುಸ್ತಕದ ಬಗ್ಗೆ ಮಾಹಿತಿ ತಿಳಿಯುವರು | **1,2,4** | **3,5,6** | **ಲಿಖಿತ–2<br>ಮೌಖಿಕ–1** | **ಲಿಖಿತ–4<br>ಮೌಖಿಕ–1** |
| 7.ಬಲ ಮತ್ತು ಒತ್ತಡ | 1. ಬಲ ಎಂದರೆ ತಳ್ಳುವಿಕೆ ಅಥವಾ ಎಳೆಯುವಿಕೆ ಎಂಬುದನ್ನು ಅರ್ಥೈಸಿಕೊಳ್ಳುವರು.<br>2. ಬಲಗಳ ಅನ್ವೇಷಣೆ – ಬಲವು ಚಲನೆಯ ಸ್ಥಿತಿ ಮತ್ತು ವಸ್ತುವಿನ ಆಕಾರವನ್ನು ಬದಲಾಯಿಸಬಹುದು ಎಂಬುದನ್ನು ವಿವರಿಸುವರು.<br>3. ಸಂಪರ್ಕ ರಹಿತ ಬಲದ ಅರ್ಥ ತಿಳಿದು ಸಂಪರ್ಕ ರಹಿತ ಬಲಗಳಾದ ಕಾಂತೀಯ ಬಲ, ಸ್ಥಾಯಿ ವಿದ್ಯುತ್ ಬಲ ಮತ್ತು ಗುರುತ್ವಾಕರ್ಷಣ ಬಲಗಳನ್ನು ವಿವರಿಸುವರು.<br>4. ಒತ್ತಡದ ಅರ್ಥ ತಿಳಿದು, ದ್ರವ ಮತ್ತು ಅನಿಲಗಳಿಂದ ಉಂಟಾಗುವ ಒತ್ತಡವನ್ನು ವಿವರಿಸುವರು. ವಾತಾವರಣದ ಒತ್ತಡವನ್ನು ವಿವರಿಸುವರು | **1** | **2,3,4** | **ಲಿಖಿತ–2<br>ಮೌಖಿಕ–1** | **ಲಿಖಿತ–3<br>ಮೌಖಿಕ–1** |
| 8.ಘರ್ಷಣೆ | 1. ಚಲಿಸಿದ ದೂರ, ಜವವನ್ನು ಲೆಕ್ಕಾಚಾರ ಮಾಡಿ ಅವುಗಳನ್ನು ಏಕಮಾನಗಳಲ್ಲಿ ವ್ಯಕ್ತಪಡಿಸುವರು.<br>2. ಲಭ್ಯವಿರುವ ಚಲನೆಯ ಮಾಹಿತಿಯನ್ನು ಆಧರಿಸಿ ಏಕರೂಪದ ಚಲನೆ ಮತ್ತು ಏಕರೂಪವಲ್ಲದ ಚಲನೆಯನ್ನು ವ್ಯತ್ಯಾಸಿಸುವರು.<br>3. ಚಲಿಸುತ್ತಿರುವ ವಸ್ತುವು ನಿಶ್ಚಲ ಸ್ಥಿತಿಗೆ ಬರಲು ಕಾರಣವನ್ನು ವಿವರಿಸುವರು.<br>4. ಘರ್ಷಣೆಯ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಗುರುತಿಸುವರು.<br>5. ಘರ್ಷಣೆಯ ವಿಧಗಳಾದ ಸ್ಥಾಯಿ ಘರ್ಷಣೆ, ಜಾರು ಘರ್ಷಣೆ ಮತ್ತು ಉರುಳು ಘರ್ಷಣೆಯನ್ನು ಸರಳವಾದ ಪ್ರಯೋಗವನ್ನು ಮಾಡುವುದರ ಮೂಲಕ ಅರ್ಥೈಸಿಕೊಳ್ಳುವರು. | **1,3,5** | **2,4** | **ಲಿಖಿತ–1<br>ಮೌಖಿಕ–1** | **ಲಿಖಿತ–2<br>ಮೌಖಿಕ–1** |
| 9.ಶಬ್ದ | 1. ಶಬ್ದದ ಉತ್ಪತ್ತಿ ವಿವರಿಸುವರು ಮತ್ತು ಶಬ್ದ ಉತ್ಪತ್ತಿ ಮಾಡುವ ಉಪಕರಣಗಳನ್ನು ವರ್ಗೀಕರಿಸುವರು.<br>2. ಶಬ್ದ ಪ್ರಸಾರಕ್ಕೆ ಮಾಧ್ಯಮ ಅವಶ್ಯಕ ಎಂಬುದನ್ನು ಚಟುವಟಿಕೆ ಮೂಲಕ ಮಾಡಿ ತೋರಿಸುವರು.<br>3. ಕಂಪನ ಪಾರ, ಆವರ್ತಕಾಲ ಮತ್ತು ಆವೃತ್ತಿ ಅರ್ಥ ತಿಳಿಯುವುದರೊಂದಿಗೆ ಶಬ್ದದ ತೀವ್ರತೆ ಮತ್ತು ಆವರ್ತವನ್ನು ಅವುಗಳ ಮೂಲಮಾನದೊಂದಿಗೆವಿವರಿಸುವರು. | **2** | **1,3** | **ಲಿಖಿತ–2** | **ಲಿಖಿತ–3** |
| | | | | **15+7** | **30+10** |

# ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ

---

## ಪ್ರಥಮ ಸೆಮಿಸ್ಟರ್ ಸಂಕಲನಾತ್ಮಕ ಮೌಲ್ಯಮಾಪನ 2022-23

**ವಿಷಯ: ವಿಜ್ಞಾನ** **ತರಗತಿ: 8**

| ಉದ್ದಿಷ್ಟವಾರು ಕೋಷ್ಟಕ | | | | |
|---|---|---|---|---|
| ಕ್ರ.ಸ | ಉದ್ದಿಷ್ಟಗಳು | ಪ್ರ.ಸಂ | ಅಂಕ | ಶೇ |
| 1 | ಜ್ಞಾನ | **5** | **06** | **20** |
| 2 | ತಿಳುವಳಿಕೆ | **6** | **12** | **40** |
| 3 | ಅನ್ವಯ | **2** | **06** | **20** |
| 4 | ಕೌಶಲ್ಯ | **2** | **06** | **20** |
| | **ಒಟ್ಟು** | **15** | **30** | **100** |

| ಪ್ರಶ್ನಾವಾರು ಕೋಷ್ಟಕ | | | | |
|---|---|---|---|---|
| ಕ್ರ.ಸಂ | ಪ್ರ.ವಿಧ | ಪ್ರ.ಸಂ | ಅಂಕ | ಶೇ |
| 1 | ಬಹು ಆಯ್ಕೆ | 4 | 4 | **12** |
| 2 | 1 ಅಂಕ | 3 | 3 | **09** |
| 3 | 2 ಅಂಕ | 4 | 8 | **24** |
| 4 | 3 ಅಂಕ | 2 | 6 | **18** |
| 5 | 4/5 ಅಂಕ | 2 | 9 | **27** |
| | **ಒಟ್ಟು** | **15** | **30** | **100** |

| ಪ್ರಶ್ನೆ ಕ್ಲಿಷ್ಟತೆಮಟ್ಟ ಆಧಾರಿತ ಕೋಷ್ಟಕ | | | | |
|---|---|---|---|---|
| ಕ್ರ.ಸಂ | ಕ್ಲಿಷ್ಟತೆ ಮಟ್ಟ | ಪ್ರ.ಸಂ | ಅಂಕ | ಶೇ |
| 1 | ಅತಿ ಸುಲಭ | 10 | 18 | **30** |
| 2 | ಸುಲಭ | 13 | 30 | **50** |
| 3 | ಕ್ಲಿಷ್ಟ | 5 | 12 | **20** |
| | **ಒಟ್ಟು** | **28** | **60** | **100** |

# ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## ಕಲಿಕಾ ಫಲ ಆಧಾರಿತ ಸಂಕಲನಾತ್ಮಕ ಮೌಲ್ಯಮಾಪನ-1, 2022-23

**ತರಗತಿ : 8 ವಿಷಯ : ವಿಜ್ಞಾನ ಅಂಕಗಳು : 30 ಸಮಯ : 1ಗಂಟೆ**

---

**ಲೆವೆಲ್-1 ಲಿಖಿತ ಪರೀಕ್ಷೆ (ನಿಗಧಿಪಡಿಸಿದ ಎಲ್ಲ ಕಲಿಕಾ ಫಲಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ)**

**I.ಕೆಳಗಿನ ಪ್ರತಿಯೊಂದು ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು ಆರಿಸಿ ಕ್ರಮಾಕ್ಷರಗಳೊಂದಿಗೆ ಬರೆಯಿರಿ.** **4x1 =4**

1. ಬ್ರೆಡ್ ಅಥವಾ ಇಡ್ಲಿಹಿಟ್ಟು ಉಬ್ಬುವುದು ಈ ಕಾರಣದಿಂದ, ______

(A) ಶಾಖ (B) ರುಬ್ಬುವಿಕೆ (C) ಯೀಸ್ಟ್ ಕೋಶಗಳ ಬೆಳವಣಿಗೆ (D) ಮಾಗುವಿಕೆ

2. ಲೋಹಗಳು ಆಮ್ಲಗಳೊಂದಿಗೆ ವರ್ತಿಸಿ ಬಿಡುಗಡೆ ಮಾಡುವ ಅನಿಲ --------

(A) ಆಕ್ಸಿಜನ್ (B) ಹೈಡ್ರೋಜನ್ (C) ಇಂಗಾಲದ ಡೈ ಆಕ್ಸೈಡ್ (D) ನೈಟ್ರೋಜನ್

3. ವಲಸೆ ಹಕ್ಕಿಗಳು ದೂರದ ಸ್ಥಳಗಳಿಗೆ ಹಾರಿಹೋಗಲು __________ ಬದಲಾವಣೆಗಳು ಕಾರಣ.

(A) ಪರಿಸರ (B) ಅಪಾಯಕಾರಿ (C) ನೈಸರ್ಗಿಕ (D) ಹವಮಾನ

4. ಈ ಕೆಳಗಿನ ಧ್ವನಿಗಳಲ್ಲಿ ಯಾರ ಧ್ವನಿ ಕನಿಷ್ಷ ಆವೃತ್ತಿ ಹೊಂದಿದೆ?

(A) ಹೆಣ್ಣು ಮಗು (B) ಗಂಡು ಮಗು (C) ಪುರುಷ (D) ಮಹಿಳೆ

**II.ಕೆಳಗಿನ ಪ್ರಶ್ನೆಗಳಿಗೆ ಒಂದು ಶಬ್ದ ಅಥವಾ ವಾಕ್ಯದಲ್ಲಿ ಉತ್ತರಿಸಿ.** **3x1 =3**

5. ಕೋಕ್‌ನ ಉಪಯೋಗಗಳನ್ನು ಬರೆಯಿರಿ.
6. ರಸ್ತೆಗಳ ಮೇಲ್ಮೈ ನಿರ್ಮಾಣದಲ್ಲಿ ಉಪಯೋಗಿಸುವ ಪೆಟ್ರೋಲಿಯಂ ಉತ್ಪನ್ನವನ್ನು ಹೆಸರಿಸಿ.
7. ಒತ್ತಡ ಎಂದರೇನು?

**III.ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.** **4x2 = 8**

8. ಧ್ವನಿಪಟ್ಟಿಗೆಯ ಚಿತ್ರ ಬರೆಯಿರಿ.
9. ಸೂಕ್ಷ್ಮಜೀವಿಗಳ ಪ್ರಮುಖ ಗುಂಪುಗಳನ್ನು ಹೆಸರಿಸಿ?
10. ಆಟಗಾರರು ಸ್ಪೈಕ್ ಇರುವ ಬೂಟುಗಳನ್ನು ಏಕೆ ಧರಿಸುತ್ತಾರೆ ಎಂದು ವಿವರಿಸಿ.
11. ಬಲದ ವಿವಿಧ ವಿಧಗಳಾವುವು?

**IV.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2x3 =6**

12. ಅರಣ್ಯ ನಾಶಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ಬರೆಯಿರಿ.
**13.** ಸಂಶ್ಲೇಷಿತ ಎಳೆಗಳನ್ನು ಉತ್ಪಾದಿಸುವುದು ನಿಜವಾಗಿಯೂ ಕಾಡುಗಳ ಸಂರಕ್ಷಣೆಗೆ ನೆರವಾಗುತ್ತದೆ.ವಿವರಿಸಿ

**V.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1x4 = 4**

14. ಈ ಕೆಳಗಿನ ಸಂದರ್ಭಗಳಲ್ಲಿ ಏನಾಗುತ್ತದೆ?

a. ತಾಮ್ರದ ಫಲಕದ ಮೇಲೆ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸುರಿದಾಗ.

b. ಕಬ್ಬಿಣದ ಮೊಳೆಗಳನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಇಟ್ಟಾಗ. ಈ ಮೇಲಿನ ಕ್ರಿಯೆಗಳ ಪದ ಸಮೀಕರಣ ಬರೆಯಿರಿ.

**VI.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1x5 = 5**

15.(a) ಕೃಷಿಯ ಹಂತಗಳನ್ನು ಪಟ್ಟಿಮಾಡಿ. ನೀರನ್ನು ಉಳಿತಾಯ ಮಾಡುವ ನೀರಾವರಿಯ ಎರಡು ವಿಧಾನಗಳನ್ನು ವಿವರಿಸಿ.

(b) ರಸಗೊಬ್ಬರಗಳು ಸಾವಯವ ಗೊಬ್ಬರಕ್ಕಿಂತ ಹೇಗೆ ಭಿನ್ನವಾಗಿವೆ ಪಟ್ಟಿಮಾಡಿ.

# ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## ಕಲಿಕಾ ಫಲ ಆಧಾರಿತ ಸಂಕಲನಾತ್ಮಕ ಮೌಲ್ಯಮಾಪನ-1, 2022-23

**ತರಗತಿ : 8 ವಿಷಯ : ವಿಜ್ಞಾನ ಅಂಕಗಳು : 30 ಸಮಯ : 1ಗಂಟೆ**

## ಲಿಖಿತ ಪರೀಕ್ಷೆಯ ಉತ್ತರಗಳು

**I.ಕೆಳಗಿನ ಪ್ರತಿಯೊಂದು ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದುದನ್ನು ಆರಿಸಿ ಕ್ರಮಾಕ್ಷರಗಳೊಂದಿಗೆ ಬರೆಯಿರಿ. 4x1 =4**

1. ಬ್ರೆಡ್ ಅಥವಾ ಇಡ್ಲಿಹಿಟ್ಟು ಉಬ್ಬುವುದು ಈ ಕಾರಣದಿಂದ, ______

(A) ಶಾಖ (B) ರುಬ್ಬುವಿಕೆ **(C) ಯೀಸ್ಟ್ ಕೋಶಗಳ ಬೆಳವಣಿಗೆ** (D) ಮಾಗುವಿಕೆ

2. ಲೋಹಗಳು ಆಮ್ಲಗಳೊಂದಿಗೆ ವರ್ತಿಸಿ ಬಿಡುಗಡೆ ಮಾಡುವ ಅನಿಲ -------

(A) ಆಕ್ಸಿಜನ್ **(B) ಹೈಡ್ರೋಜನ್** (C) ಇಂಗಾಲದ ಡೈ ಆಕ್ಸೈಡ್ (D) ನೈಟ್ರೋಜನ್

3. ವಲಸೆ ಹಕ್ಕಿಗಳು ದೂರದ ಸ್ಥಳಗಳಿಗೆ ಹಾರಿಹೋಗಲು ________ ಬದಲಾವಣೆಗಳು ಕಾರಣ.

(A) ಪರಿಸರ (B) ಅಪಾಯಕಾರಿ (C) ನೈಸರ್ಗಿಕ **(D) ಹವಮಾನ**

4. ಈ ಕೆಳಗಿನ ಧ್ವನಿಗಳಲ್ಲಿ ಯಾರ ಧ್ವನಿ ಕನಿಷ್ಠ ಆವೃತ್ತಿ ಹೊಂದಿದೆ?

(A) ಹೆಣ್ಣು ಮಗು (B) ಗಂಡು ಮಗು (C) ಪುರುಷ **(D) ಮಹಿಳೆ**

**II.ಕೆಳಗಿನ ಪ್ರಶ್ನೆಗಳಿಗೆ ಒಂದು ಶಬ್ದ ಅಥವಾ ವಾಕ್ಯದಲ್ಲಿ ಉತ್ತರಿಸಿ. 3x1 =3**

5. ಕೋಕ್‌ನ ಉಪಯೋಗಗಳನ್ನು ಬರೆಯಿರಿ.

ಉತ್ತರ:- **ಉಕ್ಕಿನ ಉತ್ಪಾದನೆ ಮತ್ತು ಅನೇಕ ಲೋಹಗಳ ಉದ್ಧರಣೆಯಲ್ಲಿ ಕೋಕ್ ಅನ್ನು ಉಪಯೋಗಿಸುತ್ತಾರೆ.**

6. ರಸ್ತೆಗಳ ಮೇಲ್ಮೈ ನಿರ್ಮಾಣದಲ್ಲಿ ಉಪಯೋಗಿಸುವ ಪೆಟ್ರೋಲಿಯಂ ಉತ್ಪನ್ನವನ್ನು ಹೆಸರಿಸಿ.

ಉತ್ತರ:- **ಕಲ್ಲಿದ್ದಲು ಡಾಂಬರು**

7. ಒತ್ತಡ ಎಂದರೇನು?

ಉತ್ತರ:- **ಏಕಮಾನ ವಿಸ್ತೀರ್ಣದಲ್ಲಿನ ಬಲವೇ ಒತ್ತಡ.**

**III.ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ. 4x2 = 8**

8. ಧ್ವನಿಪಟ್ಟಿಗೆಯ ಚಿತ್ರ ಬರೆಯಿರಿ.

ಉತ್ತರ:-



9. ಸೂಕ್ಷ್ಮಜೀವಿಗಳ ಪ್ರಮುಖ ಗುಂಪುಗಳನ್ನು ಹೆಸರಿಸಿ?

ಉತ್ತರ:- **ಸೂಕ್ಷ್ಮಜೀವಿಗಳನ್ನು ನಾಲ್ಕು ಪ್ರಮುಖ ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಈ ಗುಂಪುಗಳೆಂದರೆ, ಬ್ಯಾಕ್ಟೀರಿಯಾ, ಶಿಲೀಂಧ್ರ, ಪ್ರೋಟೋಜೋವಾ ಮತ್ತು ಕೆಲವು ಶೈವಲಗಳು.**

10. ಆಟಗಾರರು ಸ್ಪೈಕ್ ಇರುವ ಬೂಟುಗಳನ್ನು ಏಕೆ ಧರಿಸುತ್ತಾರೆ ಎಂದು ವಿವರಿಸಿ.

ಉತ್ತರ:- **ಆಟಗಾರರು ಸ್ಪೈಕ್ ಇರುವ ಬೂಟುಗಳನ್ನು ಏಕೆ ಧರಿಸುತ್ತಾರೆ ಏಕೆಂದರೆ ಸ್ಪೈಕ್‌ಗಳು ನೆಲ ಮತ್ತು ಬೂಟಗಳ ನಡುವಿನ ಘರ್ಷಣೆಯನ್ನು ಹೆಚ್ಚಿಸುವುದರ ಮೂಲಕ ಓಡುವಾಗ ಹೆಚ್ಚಿನ ಹಿಡಿತವನ್ನು ಸಾಧಿಸಬಹುದು.**

11. ಬಲದ ವಿವಿಧ ವಿಧಗಳಾವುವು?

ಉತ್ತರ:- **ಬಲದ ವಿವಿಧ ವಿಧಗಳು-ಸ್ನಾಯು, ಸಂಪರ್ಕ, ಸಂಪರ್ಕರಹಿತ, ಗುರುತ್ವಾಕರ್ಷಣೆ, ಘರ್ಷಣೆ, ಆಕಾರ, ಆಕರ್ಷಣೆ.**

**IV.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **2x3 =6**

12. ಅರಣ್ಯನಾಶಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ಬರೆಯಿರಿ.

ಉತ್ತರ:-

**ಅರಣ್ಯ ನಾಶಕ್ಕೆ ಕಾರಣಗಳು:- ಈ ಕೆಳಗಿನ ಕೆಲವು ಉದ್ದೇಶಗಳಿಗಾಗಿ ಅರಣ್ಯದಲ್ಲಿರುವ ಮರಗಳನ್ನು ಕಡಿಯಲಾಗುತ್ತದೆ.**

- **ವ್ಯವಸಾಯ ಭೂಮಿಯನ್ನಾಗಿ ಪರಿವರ್ತಿಸಲು**
- **ಮನೆಗಳನ್ನು ಮತ್ತು ಕಾರ್ಖಾನೆಗಳನ್ನು ಕಟ್ಟಲು**
- **ಪೀಠೋಪಕರಣಗಳನ್ನು ತಯಾರಿಸಲು ಅಥವಾ ಉರುವಲಾಗಿ ಉಪಯೋಗಿಸಲು**

**ಅರಣ್ಯನಾಶದ ಪರಿಣಾಮಗಳು:-**

- **ಅರಣ್ಯನಾಶದಿಂದಾಗಿ ವಾತಾವರಣದಲ್ಲಿನ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣ ಹೆಚ್ಚುತ್ತದೆ.**
- **ಅಂತರ್ಜಲದ ಮಟ್ಟ ಕುಸಿಯುತ್ತದೆ.**
- **ಅರಣ್ಯನಾಶವು ಪರಿಸರದ ಸಮತೋಲನವನ್ನು ಹಾಳುಮಾಡುತ್ತದೆ**
- **ಮರಗಳ ಸಂಖ್ಯೆ ಕಡಿಮೆಯಾದರೆ ಮಣ್ಣಿನ ಸವಕಳಿ ಹೆಚ್ಚುತ್ತದೆ.**
- **ಪ್ರವಾಹಗಳು ಮತ್ತು ಬರಗಾಲದ ಪರಿಸ್ಥಿತಿ ಉಂಟಾಗುತ್ತವೆ.**

**13.** ಸಂಶ್ಲೇಷಿತ ಎಳೆಗಳನ್ನು ಉತ್ಪಾದಿಸುವುದು ನಿಜವಾಗಿಯೂ ಕಾಡುಗಳ ಸಂರಕ್ಷಣೆಗೆ ನೆರವಾಗುತ್ತದೆ.ವಿವರಿಸಿ

ಉತ್ತರ:- **ನೈಸರ್ಗಿಕ ಎಳೆಗಳ ಕಚ್ಚಾವಸ್ತುಗಳು ನೈಸರ್ಗಿಕವಾಗಿ ಪ್ರಮುಖವಾಗಿ ಗಿಡಮರಗಳಿಂದ ದೊರೆಯುತ್ತವೆ.ಇದರರ್ಥ ಅಪಾರ ಗಿಡಮರಗಳ ನಾಶ.ಇದು ಅರಣ್ಯನಾಶಕ್ಕೆ ಕಾರಣವಾಗುತ್ತದೆ.ಆದರೆ ಸಂಶ್ಲೇಷಿತ ಎಳೆಗಳ ಕಚ್ಚಾವಸ್ತುಗಳು ಪ್ರಮುಖವಾಗಿ ಪೆಟ್ರೋ ರಾಸಾಯನಿಕಗಳಾಗಿವೆ. ಆದ್ದರಿಂದ ಸಂಶ್ಲೇಷಿತ ಎಳೆಗಳನ್ನು ಉತ್ಪಾದಿಸುವುದು ನಿಜವಾಗಿಯೂ ಕಾಡುಗಳ ಸಂರಕ್ಷಣೆಗೆ ನೆರವಾಗುತ್ತದೆ.**

**V.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1x4 = 4**

14. ಈ ಕೆಳಗಿನ ಸಂದರ್ಭಗಳಲ್ಲಿ ಏನಾಗುತ್ತದೆ?

a. ತಾಮ್ರದ ಫಲಕದ ಮೇಲೆ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲ ಸುರಿದಾಗ.

ಉತ್ತರ:- **ತಾಮ್ರದ ಸಲ್ಫೇಟ್‌ನ ನೀಲಿ ಬಣ್ಣದ ಹರಳುಗಳು, ಉಂಟಾಗುವುದರ ಜೊತೆಗೆ, ಹೈಡ್ರೋಜನ್ ಅನಿಲ ಸಹ ಬಿಡುಗಡೆಯಾಗುತ್ತದೆ.**

**ತಾಮ್ರ + ಸಲ್ಫ್ಯೂರಿಕ್ ಆಮ್ಲ -> ತಾಮ್ರದ ಸಲ್ಫೇಟ್ + ಹೈಡ್ರೋಜನ್**

b. ಕಬ್ಬಿಣದ ಮೊಳೆಗಳನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಇಟ್ಟಾಗ. ಈ ಮೇಲಿನ ಕ್ರಿಯೆಗಳ ಪದ ಸಮೀಕರಣ ಬರೆಯಿರಿ.

ಉತ್ತರ:- **ಕಬ್ಬಿಣವು ಹೆಚ್ಚು ಕ್ರಿಯಾಶೀಲವಾಗಿದ್ದು, ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಗೊಳಿಸುತ್ತದೆ.ತಾಮ್ರವು ಮೊಳೆಯ ಮೇಲೆ ಸಂಗ್ರಹವಾಗುತ್ತದೆ. ಮತ್ತು ತಾಮ್ರದ ಸಲ್ಫೇಟ್ ದ್ರಾವಣದ ನೀಲಿ ಬಣ್ಣ ಕ್ಷೀಣಿಸುತ್ತದೆ.**

**VI.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **1x5 = 5**

15.(a) ಕೃಷಿಯ ಹಂತಗಳನ್ನು ಪಟ್ಟಿಮಾಡಿ. ನೀರನ್ನು ಉಳಿತಾಯ ಮಾಡುವ ನೀರಾವರಿಯ ಎರಡು ವಿಧಾನಗಳನ್ನು ವಿವರಿಸಿ.

(b) ರಸಗೊಬ್ಬರಗಳು ಸಾವಯವ ಗೊಬ್ಬರಕ್ಕಿಂತ ಹೇಗೆ ಭಿನ್ನವಾಗಿವೆ ಪಟ್ಟಿಮಾಡಿ.

ಉತ್ತರ:–

**(a) ಕೃಷಿಯ ಹಂತಗಳು**

**(1) ಮಣ್ಣನ್ನು ಹದಗೊಳಿಸುವಿಕೆ (2) ಬಿತ್ತನೆ (3) ಸಾವಯವ ಗೊಬ್ಬರಗಳು ಮತ್ತು ರಸಗೊಬ್ಬರಗಳನ್ನು ಸೇರಿಸುವುದು (4) ನೀರಾವರಿ (5) ಕಳೆಗಳಿಂದ ರಕ್ಷಣೆ (6) ಕೊಯ್ಲು (7) ಸಂಗ್ರಹಣೆ**

**ನೀರನ್ನು ಉಳಿತಾಯ ಮಾಡುವ ನೀರಾವರಿಯ ಎರಡು ವಿಧಾನಗಳು**

**1)ತುಂತು ನೀರಾವರಿ ವಿಧಾನ ಮತ್ತು 2) ಹನಿ ನೀರಾವರಿ ವಿಧಾನ**

(b)

| ಕ್ರ.ಸಂ | ರಸಗೊಬ್ಬರ | ಸಾವಯವಗೊಬ್ಬರ |
|---|---|---|
| 1 | ರಸಗೊಬ್ಬರವು ಮಾನವ ನಿರ್ಮಿತ ನಿರವಯವ ಲವಣ. | ಸಾವಯವ ಗೊಬ್ಬರವು ಒಂದು ನೈಸರ್ಗಿಕ ಪದಾರ್ಥವಾಗಿದ್ದು,ಅದನ್ನುಸಗಣಿಮತ್ತುಸಸ್ಯಗಳ ಉಳಿಕೆಗಳ ವಿಘಟನೆಯಿಂದ ಪಡೆಯಲಾಗುತ್ತದೆ. |
| 2 | ರಸಗೊಬ್ಬರಗಳನ್ನು ಕಾರ್ಖಾನೆಗಳಲ್ಲಿ ಉತ್ಪಾದಿಸುತ್ತಾರೆ. | ಸಾವಯವ ಗೊಬ್ಬರಗಳನ್ನು ಬಯಲುಗಳಲ್ಲಿ ಉತ್ಪಾದಿಸಬಹುದು. |
| 3 | ರಸಗೊಬ್ಬರಗಳು ಯಾವುದೇ ರೀತಿಯ ಹ್ಯೂಮಸ್ ಅನ್ನು ಮಣ್ಣಿಗೆ ಒದಗಿಸುವುದಿಲ್ಲ | ಸಾವಯವ ಗೊಬ್ಬರವು ಸಾಕಷ್ಟು ಹ್ಯೂಮಸ್ ಅನ್ನು ಮಣ್ಣಿಗೆ ಒದಗಿಸುತ್ತದೆ. |
| 4 | ರಸಗೊಬ್ಬರಗಳು ನೈಟ್ರೋಜನ್,ಫಾಸ್ಫರಸ್ ಮತ್ತು ಪೊಟ್ಯಾಸಿಯಂಗಳಂತಹ ಸಸ್ಯಪೋಷಕಗಳಿಂದ ಸಮೃದ್ಧವಾಗಿವೆ. | ಸಾಪೇಕ್ಷವಾಗಿ ಸಾವಯವ ಗೊಬ್ಬರವು ಸಸ್ಯಪೋಷಕಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿವೆ. |

# ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## ಕಲಿಕಾ ಫಲ ಆಧಾರಿತ ಸಂಕಲನಾತ್ಮಕ ಮೌಲ್ಯಮಾಪನ-1, 2022-23

**ತರಗತಿ : 8** **ವಿಷಯ : ವಿಜ್ಞಾನ** **ಅಂಕಗಳು : 10**

## ಮೌಖಿಕ ಪರೀಕ್ಷೆ

1.ಕೆಳಗಿನ ಸಸ್ಯಜನ್ಯ ಆಹಾರದ ಘಟಕಾಂಶವು ಸಸ್ಯದ ಯಾವ ಭಾಗವಾಗಿ ರೂಪುಗೊಂಡಿದೆ ಎಂಬುದನ್ನು ಹೇಳು. 1 ಅಂಕ

ಟೊಮ್ಯಾಟೋ, ಶುಂಠಿ , ಕ್ಯಾರೆಟ್, ಮೂಲಂಗಿ ,ಹೂಕೋಸು

2. ಆಹಾರ ಸಂರಕ್ಷಣೆಯ ವಿಧಾನಗಳನ್ನು ತಿಳಿಸು. 1 ಅಂಕ

3.ಹತ್ತಿ ಬಟ್ಟೆ ತಯಾರಿಕಾ ಹಂತಗಳನ್ನು ಹೇಳು. 2 ಅಂಕ

4.ಪೆಟ್ರೋಲಿಯಂನ ವಿವಿಧ ಘಟಕಗಳ ಉಪಯೋಗಗಳನ್ನು ಹೇಳು. 2 ಅಂಕ

5.ಕೆಂಪು ದತ್ತಾಂಶ ಪುಸ್ತಕ ಎಂದರೇನು? 1 ಅಂಕ

6.ಬಲವು ಚಲನೆಯ ಸ್ಥಿತಿಯನ್ನು ಬದಲಾಯಿಸುವ ಮತ್ತು ಬಲವು ವಸ್ತುವಿನ ಆಕಾರವನ್ನು ಬದಲಾಯಿಸುವುದಕ್ಕೆ ಉದಾಹರಣೆ ಕೊಡು. 1 ಅಂಕ

7.ಏಕರೂಪದ ಚಲನೆ ಮತ್ತು ಏಕರೂಪವಲ್ಲದ ಚಲನೆಯನ್ನು ವ್ಯತ್ಯಾಸ ತಿಳಿಸು. 2 ಅಂಕ

# ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ

## ಕಲಿಕಾ ಫಲ ಆಧಾರಿತ ಸಂಕಲನಾತ್ಮಕ ಮೌಲ್ಯಮಾಪನ-1, 2022-23

ತರಗತಿ : 8 ವಿಷಯ : ವಿಜ್ಞಾನ ಅಂಕಗಳು : 10

### ಮೌಖಿಕ ಪರೀಕ್ಷೆ ಅಂಕ ನಮೂದು

| ಕ್ರ.ಸಂ | ವಿದ್ಯಾರ್ಥಿ ಹೆಸರು | ಪ್ರಶ್ನೆಗಳ ಸಂಖ್ಯೆ | | | | | | | ಒಟ್ಟು ಅಂಕ 10 ಕ್ಕೆ |
|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | |
| | | 1 ಅಂಕ | 1 ಅಂಕ | 2 ಅಂಕ | 2 ಅಂಕ | 1 ಅಂಕ | 1 ಅಂಕ | 2 ಅಂಕ | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

# ಧನ್ಯವಾದಗಳು

ಇಂದ

**ಅಂಜನಪ್ಪ ಕೆ ಆರ್**

**ವಿಜ್ಞಾನ ಸಹಶಿಕ್ಷಕರು**

**ಸ.ಪ್ರೌ.ಶಾಲೆ ಮುರುಂಡಿ ಅರಸೀಕೆರೆ ತಾಲ್ಲೂಕು**

**ಹಾಸನ ಜಿಲ್ಲೆ**